

■ ಅನು ಬೆಳ್ಳೆ

# ಪಾರ್ಟಿ ಹಾಲ್‌ನಲ್ಲಿ ಮೇನಕಾ

ಪಾರ್ಟಿಗೆ ಕಳೆಕಟ್ಟುವಂತೆ ಓಡಾಡುತ್ತಿದ್ದ ಚುರುಕಿನ ಹುಡುಗಿ ಮೇನಕಾ ತಕ್ಷಣವೇ ಜನ ಸಮೂಹದ ನಡುವೆ ಆಲೋಚನೆಗೆ ಬಿದ್ದಂತೆ ನಿಂತಳು. ಚಿಕ್ಕಮ್ಮ ಇನ್ನೂ ಪಾರ್ಟಿ ಹಾಲ್‌ಗೆ ಬಂದಿರುವುದು ಕಾಣಿಸಲಿಲ್ಲ. ಎಡಗೈಯ ಮೇಲೆ ಇಳಿಬಿಟ್ಟಿದ್ದ ಹೊಳಪಿನ ಕುಸುರಿಯ ಕೆಲಸವಿದ್ದ ಫ್ಯಾನ್ಸಿ ಸೀರೆಯ ಸೆರಗು ನೆಲ ಸಾರಿಸುವಂತೆ ಗಾಳಿಗೆ ಹಾರಾಡುತ್ತಿತ್ತು. ಅಲಂಕರಿಸಿದ ರಂಗಿ ರಂಗಿನ ಫೆಸ್ಟೂನ್, ಬಲೂನ್‌ಗಳು, ವಿವಿಧ ವಿನ್ಯಾಸದಲ್ಲಿ ಕತ್ತರಿಸಿದ ಬೇಗಡೆಯ ಹೂವುಗಳು ಮಂದ ಬೆಳಕಿಗೆ ಪ್ರತಿಫಲಿಸಿ ನಕ್ಕವು. ಮೇನಕಾ ಮತ್ತೊಮ್ಮೆ ಸುತ್ತಲೂ ಕಣ್ಣಾಡಿಸಿದಳು. ಚಿಕ್ಕಮ್ಮನ ಗೋಚರವಿರಲಿಲ್ಲ. ಆತಂಕ ಮೆಲ್ಲಗೆ ಅವಳೆದೆಯನ್ನು ಆವರಿಸಿಕೊಂಡಿತು.

ಜನಜಂಗುಳಿಯ ನಡುವೆ ಗಾಳಿಯಂತೆ ತೂರಿಕೊಂಡು ಹಜಾರದಿಂದ ಮೇಲಕ್ಕೇರುವ ಮೆಟ್ಟಿಲುಗಳತ್ತ ನಡೆದಳು.

'ಮೇನಕಾ' ತತ್‌ಕ್ಷಣವೇ ಪಾರ್ಟಿ ಹಾಲ್‌ನಿಂದ ಕೂಗು ಕೇಳಿಸಿತು.

ತಿಳಿ ನೀಲ ಬಣ್ಣದ ಬೆಲೆಬಾಳುವ ಅಂಗಿಯ ಮೇಲೆ ಕಡು ನೀಲಿಯ ಕೋಟು ಧರಿಸಿ, ಕ್ರಾಪನ್ನು ಹಿಂದಕ್ಕೆ ಬಾಚಿದ ಸ್ಫುರದ್ರೂಪಿ ಯುವಕ ಕೈ ಎತ್ತರಿಸಿ ಶುಭಾಶಯ ಸೂಚಿಸಿದ. ಅರೆ ಕ್ಷಣ ಕಣ್ಣುಗಳು ಗೋಲಾಕಾರಕ್ಕೆ ತೆರೆದು ಕಪ್ಪುಬೊಂಬೆ ಹೊರಗೆ ಬರುವಂತೆ ಅಚ್ಚರಿ ಪ್ರದರ್ಶಿಸಿದಳು. ಆ ಕ್ಷಣ ಮನದ ತುಮುಲ ಕರಗಿದಂತೆ ಭಾಸವಾಯಿತು.

ಆಕರ್ಷತನ ಅನಿರೀಕ್ಷಿತ ಆಗಮನ ಹೃದಯಕ್ಕೆ ಲಗ್ಗೆ ಇಟ್ಟ ತಂಪು ಬಾಣದಂತಾಯಿತು. ಪುಳಕದ ಜೊತೆಗೆ ಮೈ ಅದುರಿತು. ಹೊರಟ ಕೆಲಸವನ್ನು ಮರೆತು ಮೆಟ್ಟಿಲುಗಳನ್ನು ಒಂದೇ ಜಿಗಿತಕ್ಕೆ ಹಾರಿ ಇಳಿದು ಅವನತ್ತ ಧಾವಿಸಿದಳು.

ಯುವಕನ ಕೈಗಳು ಮುಂದಕ್ಕೆ ಚಾಚಿದವು.

'ಓಹೋ! ಕಿರಣ್, ನೀನು ಬರೋದಿಲ್ಲಾಂತ ತಿಳ್ಕೊಂಡಿದ್ದೆ' ಯುವಕನ ಕೈಗೆ ಕೈಯನ್ನು ಬೆಸೆದು ಅತೀ ಸನಿಹಕ್ಕೆ ಬಂದು ನಿಂತಳು.

'ಆಹ್ವಾನವಿಲ್ಲದೆ ಬರುವುದಾದರು ಹೇಗೆ? ಆದ್ರೂ ನಿನ್ನ ಹೃದಯದ ಕರೆ ಕೇಳಿ ಬಂದಿದ್ದೇನೆ. ಅಭ್ಯಾಗತನನ್ನು ಹೊರ ದಬ್ಬುವುದಿಲ್ಲವಷ್ಟೇ?' ಅವನ ಮಾತಿಗೆ ನಕ್ಕು ಎಡಗೈಯಿಂದ ಅವನ ಎದೆಗೆ ಹಗುರವಾಗಿ ಗುದ್ದಿದಳು.

'ನಿನ್ನ ಮೇಲೆ ನನ್ನ ಪಪ್ಪಂಗೆ ಇರೋ ಅನಾಧಾರಕ್ಕೆ ನನ್ನ ಹೊಣೆ ಮಾಡ್ಬೇಡ. ನಿನ್ನನ್ನ ಇಲ್ಲಿಂದ ಹೊರಗೆ ಕಳುಹಿಸದ ಹಾಗೆ ನಾನು ನೋಡ್ಕೋತೀನಿ' ಅವನ ದಟ್ಟವಾದ ಕ್ರಾಪ್ನ ಮೇಲೆ ಕೈಯಾಡಿಸುತ್ತಾ ನಕ್ಕಳು.

ಕಿರಣ ಎಡಗೈಯಿಂದ ಮೆತ್ತಗೆ ಅವಳ ಸೊಂಟವನ್ನು ಬಳಸಿದ. ಹಿತವಾಗಿ ನರಳಿದಳು. ಎಲ್ಲರನ್ನು ಮರೆತು ಅವನ ಕೆನ್ನೆಗೆ ತುಟಿಯೊತ್ತಿದಳು.

'ಲಹರಿ ಬಗ್ಗೆ ಏನಾದ್ರೂ ಸುಳಿವು ಸಿಕ್ಕಿದೆಯೇ?'

ಕಿರಣನ ಪ್ರಶ್ನೆಗೆ ಎದೆಗೆ ಕೈ ಹಚ್ಚಿ ನೂಕಿದಳು. ನಸು ನಕ್ಕು ದೂರವೇ ಉಳಿದ.

'ನೀನು ಇಂತಹ ಒಳ್ಳೆಯ ವಾತಾವರಣವನ್ನ ಹಾಳು ಮಾಡೋದಿಕ್ಕೆ ಬಂದಿರೋ ಹಾಗಿದೆ' ಕಣ್ಣುಗಳಲ್ಲಿ ಜ್ವಾಲೆಯಿತ್ತು. ಕಿರಣನದ್ದು ಅದೇ ಮುಗುಳ್ನಗು. ಹತ್ತಿರಕ್ಕೆ ಬಂದು ಅವಳ ಕೈ ಹಿಡಿದ.